947(266) ಶ್ರೀ ಗುರುಪಾದಪ್ಪ ನಾಗ್ಮಾರಪ್ಪಳ್ಳಿ (ಔರದ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಚಿಂತಾಕಿ ಗ್ರಾಮದಲ್ಲಿ ಪೋಲೀಸ್ ಠಾಣೆ ಇಲ್ಲದೆ ಇರುವುದನ್ನು ಸರ್ಕಾರ ಗಮನಿಸಿದಿಯೇ ?

ಆ) ಹಾಗಾಗಿದ್ದಲ್ಲಿ ಆ ಗ್ರಾಮದಲ್ಲಿ ಪೋಲೀಸ್ ಠಾಣೆ ಇಲ್ಲದಿರುವುದರಿಂದ ಗ್ರಾಮದ ಜನರು ಹಾಗು ರೈತರುಗಳಿಗೆ ಆಗುತ್ತಿರುವ ತೊಂದರೆಗಳಿಂದ ನಕ್ಸಲಿಯ ಚಟುವಟಿಕೆಗಳು ನಡೆಯುತ್ತಿರುವುದರಿಂದ ಪ್ರಾಧಾನ್ಯತೆಯ ಮೇಲೆ ಈ ಗ್ರಾಮಕ್ಕೆ ಪೋಲೀಸ್ ಠಾಣೆಯನ್ನು ಪ್ರಸಕ್ತ ವರ್ಷದಲ್ಲಿಯೇ ಮಂಜೂರು ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಂ.ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ಹೌದು

ಆ) ಪ್ರಸ್ತಾವನೆ ಇರುವುದಿಲ್ಲ.

ಕನ್ನಡ ಬಾರದ ಐ.ಎ.ಎಸ್. ಅಧಿಕಾರಿಗಳು.

952(672) ಶ್ರೀ ವೈ.ಕೆ ರಾಮಯ್ಯ (ಕುಣಿಗಲ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಸೇವೆಯಲ್ಲಿರುವ ಎಷ್ಟು ಜನ ಐ.ಎ.ಎಸ್. ಅಧಿಕಾರಿಗಳಿಗೆ ಕನ್ನಡ ಓದಲು-ಬರೆಯಲು ಬರುತ್ತದೆ ಮತ್ತು ಎಷ್ಟು ಜನರಿಗೆ ಬರುವುದಿಲ್ಲ ?

ಆ) ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಾರದೇ ಇರುವ ಅಧಿಕಾರಿಗಳ ವಿಷಯದಲ್ಲಿ ಸರ್ಕಾರದ ನಿಲುವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) :-

ಅ) ಕರ್ನಾಟಕ ರಾಜ್ಯ ಸರ್ಕಾರದ ಸೇವೆಯಲ್ಲಿರುವ ಎಲ್ಲಾ ಐ.ಎ.ಎಸ್. ಅಧಿಕಾರಿಗಳಿಗೆ ಸಾಮಾನ್ಯವಾಗಿ ಕನ್ನಡ ಓದಲು ಬರೆಯಲು ಬರುತ್ತದೆ. ಆದರೆ ಹೊರ ರಾಜ್ಯಗಳಿಂದ ಐ.ಎ.ಎಸ್‌ಗೆ ಹೊಸದಾಗಿ ನೇಮಕ ಹೊಂದಿ ಕರ್ನಾಟಕ ಕೇಡರ್‌ಗೆ ಬರುವ ಐ.ಎ.ಎಸ್. ಅಧಿಕಾರಿಗಳು ಕನ್ನಡ ಭಾಷೆಗೆ ಅಪರಿಚಿತರಿವುದರಿಂದ, ಅವರು ಕನ್ನಡವನ್ನು ಕಲಿಯಲು ತಕ್ಕಮಟ್ಟಿಗೆ ಸಮಯ ಬೇಕಾಗುತ್ತದೆ.

ಆ) ಐ.ಎ.ಎಸ್ ಪ್ರೋಬೇಷನರ್ಸ್, ಮುಸ್ಸೂರಿಯ ಅಕಾಡೆಮಿಯಲ್ಲಿ ಹಾಗು ಮೈಸೂರಿನಲ್ಲಿ ಕಡ್ಡಾಯ ತರಬೇತಿಗೆ ಒಳಪಡುತ್ತಾರೆ . ಕನ್ನಡ ಭಾಷೆಯನ್ನು ಇಲಾಖಾ ಪರೀಕ್ಷೆಯ ಒಂದು ವಿಷಯವನ್ನು ಎಲ್ಲಾ ಐ.ಎ.ಎಸ್. ಅಧಿಕಾರಿಗಳಿಗೆ ನಿಗದಿಪಡಿಸಲಾಗಿದೆ. ಅಖಿಲ ಭಾರತ ಸೇವಾ ಅಧಿಕಾರಿಗಳಿಗೆ ಉನ್ನತ ಮಟ್ಟದ ಕನ್ನಡ ಆಡಳಿತ ಭಾಷೆಯ ಬಗ್ಗೆ ತರಬೇತಿಯ ರೂಪ-ರೇಷೆಗಳನ್ನು ಸೂಚಿಸಲು ಸರ್ಕಾರವು ಒಂದು ಪ್ರತ್ಯೇಕ ಸಮಿತಿಯನ್ನು ರಚಿಸಿದೆ ಮತ್ತು ಈ ದಿಶೆಯಲ್ಲಿ ಸಮಿತಿಯು ಈಗಾಗಲೇ ಕಾರ್ಯೋನ್ಮುಕವಾಗಿದೆ.

ಉಪ ಮುಖ್ಯಮಂತ್ರಿಗಳ ಸ್ಥಾನಮಾನ.